# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 150
ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ
(ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 28.01.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 3ರ ಅನ್ವಯ ಸರ್ಕಾರಿ ಜಮೀನುಗಳ ಭೂ ಲಭ್ಯತಾ ಪಟ್ಟಿಯನ್ನು ತಯಾರಿಸಲಾಗಿದೆಯೇ; | ಮಂಡ್ಯ ಜಿಲ್ಲೆಯಲ್ಲಿನ ಪ್ರತಿ ತಾಲ್ಲೂಕುಗಳಲ್ಲಿ ಪ್ರತಿ ವರ್ಷ ಜುಲೈ ತಿಂಗಳ 01 ನೇ ದಿನಾಂಕದಂದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 3ರ ಅನ್ವಯ ಸರ್ಕಾರಿ ಜಮೀನುಗಳ ಭೂ ಲಭ್ಯತಾ ಪಟ್ಟಿಯನ್ನು ಹೊರಡಿಸಲಾಗುತ್ತಿದೆ. |
| (ಆ) | ಹಾಗಿದ್ದಲ್ಲಿ, ಭೂ ಲಭ್ಯತಾ ಪಟ್ಟಿ ಪ್ರಕಾರ ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿರುವ ಸರ್ಕಾರಿ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು; (9 ವಿವಿಧ ರೀತಿಯ ಭೂ ವರ್ಗೀಕರಣದಂತೆ ತಾಲ್ಲೂಕುವಾರು ಲಭ್ಯವಿರುವ ಜಮೀನಿನ ವಿಸ್ತೀರ್ಣದ ಮಾಹಿತಿ ನೀಡುವುದು); | ಭೂ ಲಭ್ಯತಾ ಪಟ್ಟಿಯಲ್ಲಿ ಹೊರಡಿಸಿರುವಂತೆ ಯಾವುದೇ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. |
| (ಇ) | ನಿಯಮಗಳನ್ವಯ ಪ್ರತಿ ವರ್ಷ 'ಭೂ ಲಭ್ಯತಾ ಪಟ್ಟಿ' ಅನ್ನು ಪರಿಷ್ಕರಿಸಲಾಗುತ್ತಿದೆಯೇ; ಇದ್ದಲ್ಲಿ, ಪ್ರತಿ ವರ್ಷ ಯಾವ ಮಾಹೆಯಲ್ಲಿ ಪರಿಷ್ಕರಿಸಿ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಬೇಕು ಎಲ್ಲೆಲ್ಲಿ ಪ್ರಕಟಿಸಬೇಕು (ಸಂಪೂರ್ಣ ವಿವರ ನೀಡುವುದು) | ಪ್ರತಿ ವರ್ಷ ಜುಲೈ ತಿಂಗಳ 01 ನೇ ದಿನಾಂಕದಂದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 3 ರ ಅನ್ವಯ ಸರ್ಕಾರಿ ಜಮೀನುಗಳ ಭೂ ಲಭ್ಯತಾ ಪಟ್ಟಿಯನ್ನು ತಾಲ್ಲೂಕು ಕಛೇರಿಯ ಸೂಚನಾ ಫಲಕ, ಗ್ರಾಮದ ಚಾವಡಿಯಲ್ಲಿ ಮತ್ತು ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗುತ್ತಿದೆ. |
| (ಈ) | ಇಲ್ಲದಿದ್ದಲ್ಲಿ, 'ಭೂ ಲಭ್ಯತಾ ಪಟ್ಟಿ' ಅನ್ನು ಪ್ರತಿ ವರ್ಷ ಪರಿಷ್ಕರಿಸದೇ ಇರುವುದಕ್ಕೆ ಕಾರಣಗಳೇನು; | ಪ್ರತಿ ತಾಲ್ಲೂಕುಗಳಲ್ಲಿ ಪ್ರತಿ ವರ್ಷ ಭೂ ಲಭ್ಯತಾ ಪಟ್ಟಿಯನ್ನು ಹೊರಡಿಸಲಾಗುತ್ತಿರುತ್ತದೆ. |
| (ಉ) | ಮಂಡ್ಯ ಜಿಲ್ಲೆಯಲ್ಲಿ ಕೊನೆಯದಾಗಿ 'ಭೂ ಲಭ್ಯತಾ ಪಟ್ಟಿಯನ್ನು ಪರಿಷ್ಕರಿಸಿದ್ದು ಯಾವಾಗ; (ತಾಲ್ಲೂಕುವಾರು ಮಾಹಿತಿ ನೀಡುವುದು); | ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕೊನೆಯದಾಗಿ 'ಭೂ ಲಭ್ಯತಾ ಪಟ್ಟಿ"ಯನ್ನು ಕಳೆದ ವರ್ಷ ದಿನಾಂಕ: 01.07.2025 ರಂದು ಪ್ರಕಟಿಸಲಾಗಿರುತ್ತದೆ. |
| (ಊ) | ಕಳೆದ 5 ವರ್ಷಗಳಲ್ಲಿ 'ಭೂ ಲಭ್ಯತಾ ಪಟ್ಟಿ'ಯಿಂದ ಮಂಜೂರಾತಿ ಮಾಡಲಾದ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು; ಯಾವ ಉದ್ದೇಶಗಳಿಗಾಗಿ ಮಂಜೂರಾತಿ ಮಾಡಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು); | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 3 ರ ಅನ್ವಯ ವಿಲೆಗೆ ದೊರೆಯಬಹುದಾದ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲವಾದ್ದರಿಂದ ಯಾವುದೇ ಜಮೀನನ್ನು ಮಂಜೂರಾತಿ ಮಾಡಿರುವುದಿಲ್ಲ. |

(ಕಡತ ಸಂಖ್ಯೆ: ಆರ್‌ಡಿ 11 ಎಲ್‌ಜಿವ್ಯ 2026)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು